**OS No.49/2025.**

Case called out.

**-:ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ:-**

ವಾದಿಯರು, ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ ದಾವಾ ವಿಚಾರಣೆ ಮುಗಿಯುವವರೆಗೆ ಪ್ರತಿವಾದಿಯು ಯಾ ಅವರ ತರ್ಫೆ ಜನರು ವಾದಿಯ ದಾವಾ ಸ್ಥಳಗಳ ಅನನ್ಯ ಕಬ್ಜಾ ಭೋಗ್ವಟೆಗೆ ಆತಂಕಪಡಿಸದಂತೆ, ಗಡಿಕಲ್ಲುಗಳನ್ನು ನಾಶಪಡಿಸದಂತೆ, ಹಾಗೂ ದಾವಾ ಸ್ಥಳಗಳ ಸುತ್ತಲಿರುವ ಬೇಲಿಯನ್ನು ಕಡಿದು ನಾಶ ಮಾಡದಂತೆ ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ವಾದವನ್ನು ಆಲಿಸಲಾಯಿತು, ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು.

ವಾದಿಯರು ದಾವಾ ಸ್ಥಳಗಳ ಪ್ರಸ್ತುತ ಪಹಣಿ ಪತ್ರಿಕೆಗಳು, ನಮೂನೆ-7 ರ ಪ್ರತಿ, ನಮೂನೆ-10 ರ ಪ್ರತಿ, ಕ್ರಯ ಪತ್ರ ಹಾಗೂ ಭೂ ನ್ಯಾಯ ಮಂಡಳಿಯ ಆದೇಶದ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

ವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು. ವಾದಿಯು ಹಾಜರುಪಡಿಸಿರುವ ದಾವಾ ಸ್ಥಳಗಳ ಪ್ರಸ್ತುತ ಪಹಣಿ ಪತ್ರಿಕೆಗಳಲ್ಲಿ ವಾದಿಯರ ಹೆಸರುಗಳು ನಮೂದಾಗದೇ ಇರುವುದು ಕಂಡು ಬರುತ್ತದೆ. ಸದರಿ

**OS No.49/2025.**

ದಾವಾ ಸ್ಥಳಗಳ ಪಹಣಿ ಪತ್ರಿಕೆಗಳಲ್ಲಿ ಗಣಪತಿ ವಿಷ್ಣು ಹೆಗಡೆ ಹಾಗೂ ತಿಮ್ಮಣ್ಣ ವಿಷ್ಣು ಹೆಗಡೆರವರ ಹೆಸರುಗಳು ನಮೂದಾಗಿರುವುದು ಕಂಡು ಬರುತ್ತದೆ. ಆದ್ದರಿಂದ, ಈ ಹಂತದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲೆ ಆದೇಶ ಮಾಡುವುದಕ್ಕಿಂತ ಮೊದಲು ಉಭಯಪಕ್ಷಗಾರರನ್ನು ಆಲಿಸುವ ಅವಶ್ಯಕತೆ ಇದೆ ಎಂಬ ಅಭಿಪ್ರಾಯಕ್ಕೆ ಮಾನ್ಯ ನ್ಯಾಯಾಲಯವು ಬಂದಿರುತ್ತದೆ. ಆದ್ದರಿಂದ, ಈ ಮುಂದಿನಂತೆ ಆದೇಶಿಸುತ್ತೇನೆ.

**ಆ ದೇ ಶ**

ಪ್ರತಿವಾದಿಗೆ ತುರ್ತು ನೋಟಿಸ್ ಹಾಗೂ ದಾವಾ ಸಮನ್ಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

**ಮುಂದಿನ ವಿಚಾರಣೆ ದಿನಾಂಕ** 02.04.2025.

SD/-

**C/c ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹೊನ್ನಾವರ.**